1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 26970-2023

ಸಿಡಬ್ಲೂ - 8ಪಿಡಬ್ಲೂ-3

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ರಸಾದ |
| ತಂದೆಯ ಹೆಸರು | : | ಬಾಲಚಂದ್ರ ನಲ್ಲೂರು |
| ವಯಸ್ಸು | : | 33 ವರ್ಷ |
| ಕೆಲಸ | : | ಡಿಟೆಕ್ಟೀವ್ ಪಿಐ, ಸಿಐಡಿ, ಸಿಸಿಪಿಎಸ್ |
| ವಾಸ | : | ವಿಜಯನಗರ, ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 09-10-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು 2023 ರಿಂದ ಇಲ್ಲಿಯವರೆಗೆ ಡಿಟೆಕ್ಟೀವ್ ಪಿಐ ಆಗಿ ಸಿಐಡಿ, ಸಿಸಿಪಿಎಸ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಎಲ್ ಓ ಸಿ ನೋಟಿಸನ್ನು ಹೊರಡಿಸಲಾಗಿದ್ದು, ನಂತರ ಸದರಿ ಆರೋಪಿಯು ಶಿಂಶಾಭಾದ್ ಪೋಲೀಸ್ ಠಾಣೆಯಲ್ಲಿ ದಸ್ತಗಿರಿ ಆಗಿರುವ ಬಗ್ಗೆ ಮಾಹಿತಿ ಸಂಗ್ರಹವಾಗಿದ್ದು, ನಂತರ ಚಾಸಾ 12 ರವರೊಂದಿಗೆ ಹೈದರಾಬಾದ್ ಗೆ ತೆರಳಿ ಆರೋಪಿಯನ್ನು ವಶಕ್ಕೆ ಪಡೆದು ದಸ್ತಗಿರಿ ಕ್ರಮ ಅನುಸುರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಟ್ರಾನಸಿಟ್ ವಾರೆಂಟ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಎಂದು ಗುರುತಿಸಲಾಯಿತು. ನಂತರ ಚಾಸಾ 13 ರವರ ನಿರ್ದೇಶನದ ಮೇರೆಗೆ ಒಂದು ರೆಡ್ ಮಿ ನೋಟ್ 9 ಫೋನ್, ಒಂದು ಟ್ಯಾನ್ಸಸೆಂಟ್ 4 ಜಿ ಪೆನ್ ಡ್ರೈವ್, ಒಂದು ಸಿಗೇಟ್ ಹಾರ್ಡ ಡಿಸ್ಕನ್ನು ಸಿ ಎಫ್ ಎಸ್ ಎಲ್ ಹೈದರಾಬಾದ್ ಇಲ್ಲಿಗೆ ತೆಗೆದುಕೊಂಡು ಹೋಗಿ ಅಭಿಪ್ರಾಯಕ್ಕೆ ಸಲ್ಲಿಸಿಕೊಂಡು ಆ ಬಗ್ಗೆ ಚಾಸಾ 13 ರವರಿಗೆ ವರದಿಯನ್ನು ನೀಡಿರುತ್ತೇನೆ.

ನಾನು ಮೇಲೆ ಹೇಳಿದ ವಸ್ತುಗಳನ್ನು ಸ್ವೀಕರಿಸುವ ಸಮಯದಲ್ಲಿ ಅವುಗಳು ಮುಚ್ಚಿರುವ ಸ್ಥಿತಿಯಲ್ಲಿದ್ದು ಹಾಗಾಗಿ ಆ ಸಮಯದಲ್ಲಿ ನಾನು ಅವುಗಳನ್ನು ನೋಡಿರುವುದಿಲ್ಲ.

Inspite of direction Accused has not called his counsel hence, cross taken as closed.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ